
ಸ್ಮೈಲ್ ಪ್ಲೀಸ್ ಏಪ್ರಿಲ್ 1ರ ವಿಶೇಷ




# ಕುಂಭಕರ್ಣಾಗಮನ

■ ನಂದಿನಿ ಹೆದ್ದುರ್ಗ

ಮಧ್ಯಾಹ್ನ ಮೂರೂವರೆ ಆಗಿರಬಹುದು. ಬೆಳಗಿನಿಂದ ಅಸೋಸಿಯೇಷನ್ ಫಂಡ್ ಕಲೆಕ್ಷನ್ನಿಗೆ ಅಂತ ಗುಂಪು ಕಟ್ಟಿಕೊಂಡು ಅಲೆದವಳು ಬಳಲಿ ಮನೆಗೆ ಬಂದಿದ್ದೆ. ಬಿರು ಬಿಸಿಲು. ಫಂಡು ಎತ್ತುವ ಮುಜುಗರದ ಕೆಲಸ. ಸಾಕುಸಾಕಾಗಿತ್ತು.

ಮೆಟ್ಟಿಲು ಹತ್ತುವಾಗಲೇ ಪಕ್ಕದ ಮನೆಗೆ ಬಂದಿದ್ದ, ಸದಾ ಕಿರಿಕಿರಿಯ ಪ್ರಶ್ನೆಗಳನ್ನೇ ಕೇಳುವ ದೂರದ ನೆಂಟರು ದೊಡ್ಡದಾಗಿ ನಗುತ್ತಾ 'ಯಾವಾಗ ಬಂದೆ' ಅಂದರು.

ಅರೆ... ನನ್ನ ಮನೆಗೆ ನಾನು ಬರುತಿದ್ದೀನಿ... ಅವರನ್ನು ಕೇಳಬೇಕಾದ ಪ್ರಶ್ನೆಯಲ್ಲವಾ ಇದು... ಇವರು ನನ್ನನ್ನೇ ಕೇಳ್ತಿದ್ದಾರಲ್ಲಾ ಎನಿಸಿ ಕಿರಿಕಿರಿಯಾಯಿತು. ಆದರೂ ತೋರಿಸಿಕೊಳ್ಳದೆ 'ಚೆನ್ನಾಗಿದ್ದೀರಾ' ಎಂದೆ ಉತ್ತರ ಬದಲಿಸಿ.

'ಹೆಹೆಹೆ... ಈಗಷ್ಟೇ ಊಟ ಮುಗಿಸಿ ಮಾತಾಡ್ತಾ ಕೂತ್ವಪ್ಪಾ' ಅಂದ್ರು. 'ಇದೇನು ಟಿಟ್ ಫಾರ್ ಟ್ಯಾಟಾ..? ಬರೀ ಉಲ್ಟಾ ಉತ್ತರವೇ' ಅಂದುಕೊಳ್ತಾ ನಕ್ಕವಳಂತೆ, 'ಸರಿ ಬನ್ನಿ ಮನೆಗೆ ಆಮೇಲೆ' ಎನ್ನುತ್ತಾ ಒಳಹೋದೆ.

ಗಡಿಬಿಡಿಯಲ್ಲಿ ಕೈಕಾಲು ತೊಳೆದು ಬೆಳಿಗ್ಗೆ ಅರ್ಧ ಬಿಟ್ಟ ಕೆಲಸಗಳಿಗೆ ಮೋಕ್ಷ ತೋರಲು ಸನ್ನದ್ಧಳಾದೆ. 'ಥೂ ಹೆಣ್ಣು ಜನ್ಮವೆ... ಈ ಮನೆಯಲ್ಲಿ ಬೆಳಿಗ್ಗೆ ಹೋಗುವಾಗ ಯಾವುದು ಎಲ್ಲಿ ನಿಂತಿರುತ್ತೋ ಅದು ಅಲ್ಲಿಯೇ ಮಲಗಿರುತ್ತೆ... ಹೆಜ್ಜೆ ಕೂಡ ಮುಂದೆ ಹೋಗಿರಲ್ಲ. ಇಡೀ ಮನೆ ಕೆಲಸವನ್ನು ಹೆಣ್ಣಿಗೆ ಗುತ್ತಿಗೆ ಕೊಟ್ಟವರ ಥರ ಆಡ್ತಾರೆ ಈ ಗಂಡಸರು' ಅಂದುಕೊಳ್ತಾ ಅಡುಗೆಮನೇಲಿ ಊಟ ಮಾಡಿದ್ದ ಕುರುಹುಗಳನ್ನೆಲ್ಲಾ ಅಚ್ಚುಕಟ್ಟು ಮಾಡಿ, ಸಿಂಕ್ ಖಾಲಿ ಮಾಡಿ, ಸೋಫಾದ ಧೂಳು ಒರೆಸಿ, ಮಕ್ಕಳ, ಇವರ ಬೀರು ಕ್ಲೀನು ಮಾಡಿ, ಬೆಳಿಗ್ಗೆ